# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 349
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 15.09.2022
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಪ್ರಶ್ನೆ | ಉತ್ತರ |
|---|---|
| (ಅ) ಪ್ರಸ್ತುತ ರಾಜ್ಯದಲ್ಲಿ ಸರ್ಕಾರಿ ನೌಕರರ ನಿಯೋಜನೆ/ವರ್ಗಾವಣೆಗೆ ಅನುಸರಿಸುತ್ತಿರುವ ನಿಯಮಗಳು ಮತ್ತು ಮಾನದಂಡಗಳು ಯಾವುವು; (ವಿವರ ಒದಗಿಸುವುದು) | ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16(a)(ii)ರನ್ವಯ, ಸರ್ಕಾರ ಸಮಾನ ದರ್ಜೆಯ ಹುದ್ದೆಗಳಿಗೆ, ಕಾರಣಗಳನ್ನು ಲಿಖಿತ ಮೂಲಕ ದಾಖಲಿಸಿ ಸರ್ಕಾರದ ಒಂದು ಇಲಾಖೆಯ ಅಥವಾ ಸೇವೆಯ ನೌಕರರನ್ನು ಸರ್ಕಾರದ ಇನ್ನೊಂದು ಇಲಾಖೆ ಅಥವಾ ಸೇವೆಗೆ (ತಹಶೀಲ್ದಾರ್ ಗ್ರೇಡ್-1 ಮತ್ತು ಗ್ರೇಡ್-2 ವೃಂದದ ಹುದ್ದೆಗಳಿಗೆ ಹೊರತುಪಡಿಸಿ) ನಿಯೋಜನೆ ಮೂಲಕ ನೇಮಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16(a)(ii)ರನ್ವಯ, ಸಂಬಂಧಿಸಿದ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಸರ್ಕಾರ, ಸಮಾನ ದರ್ಜೆಯ ಹುದ್ದೆಗಳಿಗೆ, ಕಾರಣಗಳನ್ನು ಲಿಖಿತ ಮೂಲಕ ದಾಖಲಿಸಿ ಒಂದು ಇಲಾಖೆಯ ಅಥವಾ ಸೇವೆಯ ನೌಕರರನ್ನು ಇನ್ನೊಂದು ಇಲಾಖೆ ಅಥವಾ ಸೇವೆಗೆ ವರ್ಗಾವಣೆ ಮೂಲಕ ನೇಮಿಸಲು ಇದ್ದ ಆಸ್ಪದವನ್ನು **ದಿನಾಂಕ:06.07.2021ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 179 ಸೇನೆನಿ 2021ರನ್ವಯ** ತೆಗೆದು ಹಾಕಲಾಗಿದೆ. |

<table>
<tr>
<td>(ಆ) ಪ್ರಸ್ತುತ ರಾಜ್ಯದಲ್ಲಿ ವಿವಿಧ ಇಲಾಖೆಗಳು ತಮ್ಮದೇ ಆದ ಬೇರೆ ಬೇರೆ ನಿಯೋಜನೆ/ವರ್ಗಾವಣೆಗೆ ನಿಯಮಗಳನ್ನು ಅನುಸರಿಸುತ್ತಿದ್ದು, ಇದರಿಂದಾಗಿ ಸರ್ಕಾರಿ ನೌಕರರು ತೊಂದರೆ ಅನುಭವಿಸುತ್ತಿರುವುದು ಮತ್ತು ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಜರುಗಿಸಿದ ಕ್ರಮ ಏನು; (ವಿವರ ಒದಗಿಸುವುದು)</td>
<td rowspan="2">ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16(a)(ii) ಅನ್ನು ಪಾಲಿಸಿ ನೌಕರರ ನಿಯೋಜನೆ ಮಾಡಬೇಕಾಗುತ್ತದೆ.</td>
</tr>
<tr>
<td>(ಇ) ಎಲ್ಲಾ ಇಲಾಖೆಗಳ ಸರ್ಕಾರಿ ನೌಕರರ ನಿಯೋಜನೆ/ವರ್ಗಾವಣೆಗೆ ಸರ್ಕಾರ ಏಕ ರೂಪದ ನಿಯಮಗಳನ್ನು ರೂಪಿಸುವ ಯೋಚನೆ ಸರ್ಕಾರದ ಮುಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು? (ವಿವರ ಒದಗಿಸುವುದು)</td>
</tr>
</table>

ಸಂಖ್ಯೆ: ಸಿಆಸುಇ 199 ಸೇನೆನಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ